<u>ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.ಗಳ</u>
<u>ನ್ಯಾಯಾಲಯ, ಶೋರಾಪುರ.</u>

**ಸಿ.ಸಿ. ನಂ. 241 /2022**

| | | |
|---|---|---|
| ಸಾಕ್ಷಿದಾರರ ಹೆಸರು | ಃಹಳ್ಳೆಪ್ಪ | ಸಿ.ಡಬ್ಲ್ಯೂಃ 4 |
| ತಂದೆ ಹೆಸರು | ಃಹಣಮಂತ್ರಾಯ ಡಂಬಳ | ಪಿ.ಡಬ್ಲ್ಯೂಃ 2 |
| ವಯಸ್ಸು | ಃ65 ವರ್ಷ | |
| ವೃತ್ತಿ | ಃಕೂಲಿಕೆಲಸ | |
| ವಾಸ ಸ್ಥಳ | ಃಪರಸನಳ್ಳಿ | |

<u>ಸಾಕ್ಷಿಗೆ ಇಂದು ದಿನಾಂಕಃ **30-06-2026** ರಂದು ಪ್ರಮಾಣ ವಚನ ಭೋಧಿಸಲಾಯಿತು.</u>
ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ

ನ್ಯಾಯಾಲಯದ ಮುಂದಿರುವ ಆರೋಪಿತನು ನನಗೆ ಪರಿಚಯ ಇರುತ್ತಾರೆ ಚಾಸಾಃ1 ನನ್ನ ಮಗನಾಗಬೇಕು. ಚಾಸಾಃ 5 ರವರು ನನ್ನ ಹೆಂಡತಿಯಾಗಬೇಕು. ಚಾಸಾಃ 6 ಮತ್ತು 7 ರವರು ನಮ್ಮ ಅಣ್ಣ-ತಮ್ಮಂದಿರಾಗಬೇಕು. ಆರೊಪಿತರಿಗೂ ಮತ್ತು ನಮಗೂ ಬಾಯಿ ಮಾತಿನ ಗಲಾಟೆಯಾಗಿರುತ್ತದೆ. ನಾನು ಪೊಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಆರೋಪಿತ ನನಗೆ ಹೊಡೆ-ಬಡೆ ಮಾಡಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಜೀವ ಬೆದರಿಕೆ ಹಾಕಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಸ.ಸ.ಅ ರವರ ವಿನಂತಿ ಮೇರೆಗೆ ಪರಿಗಣಿಸಿ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.)

ಪಾಟೀ ಸವಾಲು ಃ ಅಭೀಯೊಜನೆ ಪರ ಸ.ಸ.ರವರಿಂದಃ

ದಿ.25.19-01-2022 ರಂದು ರಾತ್ರಿ 8.00 ಗಂಟೆಗೆ ಆರೋಪಿತನು ಹಿಂದಿನ ಹಳೆಯ ದ್ವೇಷದಿಂದ ನಮ್ಮ ಮನೆಯೊಳಗೆ ಅಕ್ರಮವಾಗಿ ಪ್ರವೇಶ ಮಾಡಿ ನನ್ನೊಂದಿಗೆ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಹೊಡೆ-ಬಡೆ ಮಾಡಿದ್ದಾನೆ ಎಂದರೆ ಸರಿಯಲ್ಲ. ಸದರಿ ಜಗಳದ ಸಪ್ಪಳ ಕೇಳಿ ಚಾಸಾಃ 5 ರಿಂದ 7

ರವರು ಬಂದು ಗಜಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತನು ಚಾಸಾಃ 1 ರವರಿಗೆ ಇದೊಂದು ಸಲ ಉಳಿದಿದ್ದಿ ಇನ್ನೊಂದು ಸಾರಿ ಸಿಗು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈಗ ಮೇಲೆ ಓದಿ ಹೇಳಲಾದಂತೆ ನಿಪಿ-3 ರಂತೆ ಪೊಲಿಸರಿಗೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಈಗ ಆರೋಪಿತರೊಂದಿಗೆ ರಾಜಿಯಾಗಿದ್ದೇನೆ ಎಂದರೆ ಸರಿ. ಆ ಕಾರಣಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.